**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1468/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಮುದ್ದು | ಪ್ರಾಸಾ-1 |
| ತಂದೆಯ ಹೆಸರು | : ಪೆರ್ನಾ ಮೇಸ್ತ್ರಿ | ಚಾಸಾ-1 |
| ವಯಸ್ಸು | : 48 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 14.08.2025 |
| ವಾಸಸ್ಥಳ | : ದೊಡ್ಡಹಳ್ಳ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ 2 ಮತ್ತು 4 ನೇ ಆರೋಪಿಗಳ ಪರಿಚಯ ನನಗಿದೆ. 1, 3 ಮತ್ತು 6 ನೇ ಆರೋಪಿಗಳು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಚಾಸಾ-2 ರಿಂದ 8 ರವರ ಪರಿಚಯ ನನಗಿದೆ. ಚಾಸಾ-2 ರವರು ನನ್ನ ಹೆಂಡತಿ.

ದೊಡ್ಡಹಳ್ಳದಲ್ಲಿರುವ ಬಿ.ಹೊಳಹಳ್ಳಿ ಗ್ರಾಮದ ಸ.ನಂ.255 ರಲ್ಲಿ 1 ಎಕರೆ ಜಮೀನು ನನ್ನ ಸ್ವಾಧೀನಾನುಭವದಲ್ಲಿರುತ್ತದೆ. ಸದರಿ ಜಮೀನಿನ ಮದ್ಯದಲ್ಲಿ ಒಂದು ಕಾಲುದಾರಿ ಹಾದುಹೋಗಿರುತ್ತದೆ. ಸದರಿ ರಸ್ತೆಯ ಪಕ್ಕದಲ್ಲಿ ಒಂದು ಗೇಟ್ ಇದ್ದು, ಸದರಿ ಬೇಲಿಯನ್ನು ಹಸು ಗಳು ಹಾಳುಮಾಡಿದ್ದು, ಅದನ್ನು ಸರಿಪಡಿಸುವ ಸಮಯದಲ್ಲಿ ದಿ.20.04.2023 ರಂದು ಸ.5.00 ರಿಂದ 7.00 ಗಂಟೆಯ ವರೆಗೂ ಸದರಿ ಬೇಲಿಯನ್ನು ಸರಿ ಮಾಡುತ್ತಿದ್ದೆವು. ಅದೇ ದಿನ ಸ.6.30 ರ ಸಮಯಕ್ಕೆ ಆರೋಪಿಗಳು ಸದರಿ ಸ್ಥಳಕ್ಕೆ ಬಂದು ಸದರಿ ಜಾಗವು ನಮಗೆ ಸೇರಿರುತ್ತದೆ ನೀನು ಯಾಕೆ ಬೇಲಿ ಮಾಡುತ್ತಿದ್ದೀಯ ಎಂದು ಕೇಳಿರುತ್ತಾರೆ. ಅದಕ್ಕೆ ನಾವು ಹಸುಗಳು ಹಾಳು ಮಾಡಿರುವ ಬೇಲಿಯನ್ನು ಸರಿ ಮಾಡುತ್ತಿರುವುದಾಗಿ ತಿಳಿಸಿದ ಮೇರೆಗೂ ಆರೋಪಿಗಳು ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ನಂತರ 1 ನೇ ಆರೋಪಿ ನನ್ನ ಕೆನ್ನೆಗೆ ಹೊಡೆದಿರುತ್ತಾರೆ. ಆ ದಿನ ಘಟನಾ ಸಂದರ್ಭದಲ್ಲಿ 1 ರಿಂದ 6 ನೇ ಆರೋಪಿಗಳು ಹಾಜರಿದ್ದು, 3 ಮತ್ತು 4 ನೇ ಆರೋಪಿಗಳು ನನ್ನನ್ನು ಬಿಗಿಯಾಗಿ ಹಿಡಿದಿದ್ದು, 5 ನೇ ಆರೋಪಿಯು ನನಗೆ ದೊಣ್ಣೆಯಲ್ಲಿ ಹೊಡೆದಿರುತ್ತಾರೆ. ನಂತರ 1 ಮತ್ತು 2 ನೇ ಆರೋಪಿಗಳು 5 ನೇ ಆರೋಪಿಯೊಟ್ಟಿಗೆ ನನಗೆ ಥಳಿಸಿರುತ್ತಾರೆ. ನಂತರ ಅಲ್ಲೇ ಇದ್ದ ಚಾಸಾ-2 ರವರಿಗೆ 2, 5 ಮತ್ತು 6 ನೇ ಆರೋಪಿಗಳು ಥಳಿಸಿರುತ್ತಾರೆ.

ಸದರಿ ಗಲಾಟೆಯ ಶಬ್ದವನ್ನು ಕೇಳಿ ಮೊದಲು ಚಾಸಾ-3 ರವರು ಘಟನಾ ಸ್ಥಳಕ್ಕೆ ಬಂದಿರುತ್ತಾರೆ ನಂತರದಲ್ಲಿ ಚಾಸಾ-4 ರಿಂದ 6 ರವರು ಸ್ಥಳಕ್ಕೆ ಬಂದಿರುತ್ತಾರೆ. ಜಗಳವನ್ನು ಬಿಡಿಸಿರುತ್ತಾರೆ. ನಂತರ ಜಗಳವನ್ನು ಬಿಡಿಸಿದ ಮೇಲೂ 1 ರಿಂದ 6 ನೇ ಆರೋಪಿಗಳು ನನಗೂ ಮತ್ತು ಚಾಸಾ-2 ರವರಿಗೂ ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ಘಟನೆಯ ನಂತರ ನಾನು ಮತ್ತು ಚಾಸಾ-2 ರವರು ಆಟೋದಲ್ಲಿ ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು ನಂತರ ಹೆಚ್ಚಿನ

ಚಿಕಿತ್ಸೆಗಾಗಿ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ದಿ.22.04.2023 ರಂದು ಪೋಲಿಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

ನಂತರ ದಿ.24.04.2023 ರಂದು ಘಟನಾ ಸ್ಥಳಕ್ಕೆ ಪೋಲಿಸರು ಬಂದಿರುತ್ತಾರೆ. ಆ ದಿನ ಮ.2.00 ರಿಂದ 5.00 ರ ಸಮಯದವರೆಗೂ ಮಹಜರ್ ಕ್ರಮವನ್ನು ಜರುಗಿಸಿ, ಫೋಟೋಗಳನ್ನು ತೆಗೆದು ನನ್ನ ಸಹಿಯನ್ನು ಪಡೆದಿರುತ್ತಾರೆ. ನಂತರ ಸದರಿ ಸಮಯದಲ್ಲಿ ಚಾಸಾ-7 ಮತುತ 8 ರವರ ಸಹಿಯನ್ನು ಪಡೆದಿರುತ್ತಾರೆ. ಆ ದಿನ ನಾನು ಘಟನಾ ಸ್ಥಳವನ್ನು ಪೋಲಿಸರಿಗೆ ತೋರಿಸಿರುತ್ತೇನೆ. ನಾನು ಸದರಿ ಸಮಯದಲ್ಲಿ ಆರೋಪಿಗಳು ನನಗೆ ಥಳಿಸಲು ಉಪಯೋಗಿಸಿದ್ದ ದೊಣ್ಣೆಗಳನ್ನು ಪೋಲಿಸರ ವಶಕ್ಕೆ ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ದೊಣ್ಣೆಗಳನ್ನು ನೋಡಿ ಆ ದಿನ ಆರೋಪಿಗಳು ನನಗೆ ಥಳಿಸಲು ಉಪಯೋಗಿಸಿದ ದೊಣ್ಣೆಗಳು ಎಂದು ಗುರುತಿಸಿದ್ದು, ಅವುಗಳಲ್ಲಿ ಕಾಫೀ ಗಿಡದ ದೊಣ್ಣೆಯನ್ನು ಎಂ.ಒ.1, ಕಾಡು ಜಾತಿಯ ಮರದ ದೊಣ್ಣೆಯನ್ನು ಎಂ.ಒ.2 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಎಂ.ಒ.1(ಒ) ಮತ್ತು ಎಂ.ಒ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.22.04.2023 ರಂದು ಪೋಲಿಸರು ಪಡೆದಂತಹ ಹೇಳಿಕೆ ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯನ್ನು ನಿಪಿ-1 ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿ.24.04.2023 ರಂದು ಬರೆದಂತಹ ಮಹಜರ್ ಕ್ರಮದ ಪ್ರತಿಯನ್ನು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರ್ ಪ್ರತಿಯನ್ನು ನಿಪಿ-2, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಫೋಟೋಗಳನ್ನು ನೋಡಿ, ಅದರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸಿಡಿಯನ್ನು ನಿಪಿ-5 ಮತ್ತು ಕಲಂ 65 ಬಿ ರಡಿಯ ಪ್ರತಿಯನ್ನು ನಿಪಿ-6 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿಪರ ಶ್ರೀ ಕೆ.ಸಿ.ಸಿ ವಕೀಲರಿಂದಃ**

ನನಗೆ ಕನ್ನಡ ಓದಲು ಬರುತ್ತದೆ. ನಾನು ಈಗ ಹೇಳಿದಂತ ದಿನಾಂಕಗಳನ್ನು ನನ್ನ ಕೈಗಳ ಮೇಲೆ ಬರೆದುಕೊಂಡು ಬಂದಿದ್ದೆ ಎಂದರೆ ಸರಿಯಲ್ಲ. ಆದರೆ ಸಾಕ್ಷಿಯು ಕೈಗಳ ಮೇಲೆ ಸದರಿ ದಿನಾಂಕಗಳನ್ನು ಬರೆದುಕೊಂಡು ಬಂದಿರುವುದು ನ್ಯಾಯಾಲಯದ ಮುಂದೆ ಕಂಡುಬಂದಿರುತ್ತದೆ. ಕೃತ್ಯ ನಡೆದ ದಿನಾಂಕ, ಮಹಜರ್ ದಿನಾಂಕವನ್ನು ಕೈನಲ್ಲಿ ಬರೆದುಕೊಂಡು ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ದೂರನ್ನು ದಾಖಲಿಸಿದ ಪ್ರತಿಯಾಗಿ ನಾವು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಗಂಧದ ಮರ ಮತ್ತು ಸಾಗುವಾನೆ ಮರ ಕದ್ದ ಕುರಿತು ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಸದರಿ

ಸಮಯದಲ್ಲಿ ನಾನು ತಲೆ ಮರೆಸಿಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ 1 ಮತ್ತು 2 ನೇ ಆರೋಪಿಗಳು ನನಗೆ ಜಾಮೀನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸ.ನಂ.255 ರ ಜಮೀನು ಸುಮಾರು ಸಾವಿರ ಎಕರೆ ವಿಸ್ತೀರ್ಣವಿರುತ್ತದೆ. ಸ.ನಂ.255 ರಲ್ಲಿರುವ ಒಂದು ಎಕರೆ ಜಮೀನು ವಿಭಾಗದ ಮುಖಾಂತರ ಬಂದಿರುವುದಿಲ್ಲ. ಆದರೆ ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಪಹಣಿಯಲ್ಲಿ ನನ್ನ ಹೆಸರಿಗೆ ಜಮೀನು ವಿಭಾಗದ ಮುಖಾಂತರ ಬಂದಿದೆ ಎಂದು ತೋರಿಸಲಾಗಿದೆ ಎಂದರೆ ಸರಿ.

ಸದರಿ ಜಮೀನು ನಾನು ಅರ್ಜಿ ನೀಡದೇ ಇದ್ದ ಕಾರಣ ಮತ್ತು ಸುಳ್ಳು ದಾಖಲೆಗಳ ಮೇಲೆ ಮಂಜೂರು ಮಾಡಿಸಿಕೊಂಡ ಕಾರಣ ಸದರಿ ಮಂಜೂರಾತಿಯು ರದ್ದಾಗಿರುತ್ತದೆ ಎಂದರೆ ಸರಿ. ನನ್ನ ಮದುವೆ ಪೂರ್ವದಲ್ಲಿ ನಾವುಗಳು 1 ಮತ್ತು 2 ನೇ ಆರೋಪಿಗಳ ಮನೆಯಲ್ಲಿ ವಾಸಿಸುತ್ತಿದ್ದೆವು ಎಂದರೆ ಸರಿ. ನಾವು ಒಟ್ಟಾಗಿ ಇದ್ದ ಸಂದರ್ಭದಲ್ಲಿ ನಮ್ಮ ಮತ್ತು ಚಾಸಾ-3 ರವರ ಮಧ್ಯೆ ಗಲಾಟೆಯಾಗುತ್ತಿತ್ತು ಎಂದರೆ ಸರಿ. ಚಾಸಾ-3 ರವರು ಸ.ನಂ.255 ರಲ್ಲಿ ಒಂದು ಭಾಗವನ್ನು ಹೊಂದಿರುತ್ತಾರೆ ಎಂದರೆ ಸರಿ. ಸದರಿ ಜಮೀನಿಗೆ ಸಂಬಂಧಿಸಿದಂತೆ ನನ್ನ ಮತ್ತು ಚಾಸಾ-3 ರವರೊಟ್ಟಿಗೆ ಜಗಳವಾಗಿದ್ದು ಸದರಿ ಸಂಭಂದ ಒಂದು ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಚಾಸಾ-4 ಮತ್ತು 5 ರವರು ನನ್ನ ಅಣ್ಣನ ಮಕ್ಕಳು. ಚಾಸಾ-6 ನನ್ನ ಅಕ್ಕನ ಮಗ. 1 ಮತ್ತು 2 ನೇ ಆರೋಪಿಗಳು ರಸ್ತೆಯಲ್ಲಿ ತಿರುಗಾಡಲು ನಾನು ಅಡ್ಡಿಪಡಿಸುತ್ತಿರುತ್ತೇನೆ ಎಂದು ಅವರು ಸಾಕಷ್ಟು ಬಾರಿ ಬಣಕಲ್ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರಸ್ತೆಯ ವಿಷಯವಾಗಿ ನಾವು ಮೋಜಣಿ ಮಾಡಿಸಲು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿತ್ತು ಎಂದರೆ ಸರಿ. ಸದರಿ ವಿಷಯದ ಕುರಿತು ನನಗೂ ಮತ್ತು 1 ನೇ ಆರೋಪಿಗೂ ನೋಟೀಸನ್ನು ಜಾರಿ ಮಾಡಿ ಸರ್ವೇಯರ್ ಸ್ಥಳಕ್ಕೆ ಭೇಟಿ ನೀಡಿದ್ದರು ಎಂದರೆ ಸರಿ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯ ಮೋಜಣಿದಾರರು ಸ್ಥಳ ಪರಿಶೀಲನೆ ಮಾಡಿ ನೀಡಿದ ನಕ್ಷೆ ಎಂದರೆ ಸಾಕ್ಷಿಯು ಅದನ್ನು ಗುರುತಿಸಲು ನಿರಾಕರಿಸಿರುತ್ತಾರೆ. ಭಾರತಿ ಬೈಲಿನಿಂದ ನಮ್ಮ ಮನೆಯನ್ನು ತಲುಪಲು ಇರುವುದು ಒಂದೇ ರಸ್ತೆ. ಸದರಿ ಮಾರ್ಗವಾಗಿ ಬರುವಾಗ ಮೊದಲು ಚಾಸಾ-3 ರವರ ಮನೆ, ನಂತರ ನಮ್ಮ ಮನೆ ಆನಂತರದಲ್ಲಿ ಆರೋಪಿಗಳ ಮನೆ ಬರುತ್ತದೆ. ಸದರಿ ರಸ್ತೆಯು ಆರೋಪಿತರ ಮನೆಯ ನಂತರ ಕುಂದೂರಿಗೆ ತಲುಪಬಹುದು. ಭಾರತಿ ಬೈಲಿನಿಂದ ಅಣ್ಣಪ್ಪನ ಮನೆ ತಲುಪಿದ ನಂತರ ಕುಂದೂರಿಗೆ ತಲುಪುವ ರಸ್ತೆಯ ಮೇಲೆ ನನಗೆ ಹಕ್ಕಿದೆ. ದಿ.20.04.2023 ಭಾನವಾರವಾಗಿರುತ್ತದೆ. 1 ಮತ್ತು 2 ನೇ ಆರೋಪಿಗಳಿಗೆ 6 ಜನ ಮಕ್ಕಳಿರುತ್ತಾರೆ. ಅವರುಗಳಲ್ಲಿ 3 ಜನ ಮಂಗಳೂರಿನಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಕೇವಲ ಇಬ್ಬರು ಎಂದು ನುಡಿಯುತ್ತಾರೆ. ಅರುಣ, ಹರೀಶ ಮತ್ತು ಸೌಮ್ಯ ಎಂಬುವರು ಮಂಗಳೂರಿನಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಹರೀಶ ಎಂಬುವರು ಇಲ್ಲಿಯೇ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ಕೃತ್ಯ ನಡೆಯಿತು ಎಂದು ಹೇಳಲಾದ ದಿನ ಅವರೆಲ್ಲರೂ ಸ್ಥಳದಲ್ಲಿ ಇದ್ದರು. ನನ್ನ ಹೇಳಿಕೆಯಲ್ಲಿ ಸದರಿ ವ್ಯಕ್ತಿಗಳು ಊರಿಗೆ ಹಿಂತಿರುಗಿರುವ ಬಗ್ಗೆ ಹೇಳಿಕೆ ನೀಡಿರುವುದಿಲ್ಲ.

3 ನೇ ಆರೋಪಿಯು ಚಂದುವಳ್ಳಿಯ ವಾಸಿಯಾಗಿರುತ್ತಾರೆ. ಚಂದುವಳ್ಳಿಯಿಂದ ನಮ್ಮ ಮನೆಗೆ 20 ಕೀ.ಮೀ ಅಂತರವಿರುತ್ತದೆ. 4 ರಿಂದ 6 ನೇ ಆರೋಪಿಗಳು ತೋಟದ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿ. ನಾವು ರಸ್ತೆಗೆ ಬೇಲಿ ಹಾಕಿದ ನಂತರ ಚಾಸಾ-3 ರವರು ಯಾವುದೇ ಬೇಲಿ ಹಾಕಿರುವುದಿಲ್ಲ. ನಾನು ಚಿಕಿತ್ಸೆ ಪಡೆಯುವ ಸಮಯದಲ್ಲಿ ನನಗೆ ಹಲ್ಲೆ ಮಾಡಿದವರ ಹೆಸರು ಮತ್ತು ಯಾವುದರಿಂದ ಹಲ್ಲೆ ಮಾಡಿರುತ್ತಾರೆ ಎಂದು ವೈದ್ಯರಿಗೆ ತಿಳಿಸಿರುತ್ತೇನೆ. ನಾನು ಮತ್ತು ಚಾಸಾ-2 ರವರು ಆ ದಿನ ಆಸ್ಪತ್ರೆಗೆ ಹೋಗಿರುತ್ತೇವೆ, ಸದರಿ ವಿಷಯದ ಕುರಿತು ವೈದ್ಯರಿಗೆ ತಿಳಿಸಿರುತ್ತೇನೆ. ನಾನು ರಾ.8.30 ರ ಸಮಯಕ್ಕೆ ಆಸ್ಪತ್ರೆಗೆ ಹೊರಟಿರುತ್ತೇನೆ. ಆಸ್ಪತ್ರೆಗೆ ತಲುಪುವಷ್ಟರಲ್ಲಿ ರಾ.10.30 ರ ಸಮಯವಾಗಿರುತ್ತದೆ. ಬಣಕಲ್ ನಲ್ಲಿ ಆಸ್ಪತ್ರೆ ಇರುತ್ತದೆ ಎಂದರೆ ಸರಿ. ನಾನು ಬಣಕಲ್ ಆಸ್ಪತ್ರೆಗೆ ಹೋಗಿರುವುದಿಲ್ಲ. ಆರೋಪಿಗಳ ಹಲ್ಲೆಯಿಂದ ನಾನು ಧರಿಸಿದ್ದ ವಸ್ತ್ರವು ಹರಿದಿತ್ತು. ಮಹಜರ್ ಕಾಲದಲ್ಲಿ ಸದರಿ ಬಟ್ಟೆಯನ್ನು ನಾನು ಪೋಲಿಸರಿಗೆ ನೀಡಿರುವುದಿಲ್ಲ. ಆರೋಪಿಗಳ ಹಲ್ಲೆಯಿಂದ ನನಗೆ ಯಾವುದೇ ರಕ್ತಸ್ರಾವವಾಗಿರುವುದಿಲ್ಲ ಆದರೆ ನನ್ನ ಕಾಲು ಊತಗೊಂಡಿರುತ್ತದೆ. ನಾನು ಹಲ್ಲೆಯ ನಂತರ ಆಸ್ಪತ್ರೆಗೆ ದಾಖಲಾದ ಸಮಯದಲ್ಲಿ ಮಾತನಾಡಲು ಯಾವುದೇ ತೊಂದರೆ ಇರಲಿಲ್ಲ.

ನನಗೆ ಮೂಡಿಗೆರೆಯ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆಯನ್ನು ನೀಡಿರುವುದಿಲ್ಲ, ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ನಾವು ಚಿಕ್ಕಮಗಳೂರಿನ ಆಸ್ಪತ್ರೆಗೆ ತಲುಪುವಾಗ ರಾ.11.00 ರ ಸಮಯವಾಗಿತ್ತು. ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ನನಗೆ ಹಲ್ಲೆಯಾದ ಕುರಿತು ವೈದ್ಯರಿಗೆ ತಿಳಿಸಿರುತ್ತೇನೆ. ನಾನು ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ 3 ದಿನಗಳ ಕಾಲ ದಾಖಲಾಗಿರುತ್ತೇನೆ. ನಾನು ದಿ.22.04.2023 ರಂದು ಆಸ್ಪತ್ರೆಯಿಂದ ಹಿಂದಿರುಗಿರುತ್ತೇನೆ ಎಂದರೆ ಸರಿ. ಮನೆಗೆ ಹಿಂತಿರುಗಿದಾಗ ಸ.5.00 ರ ಸಮಯವಾಗಿತ್ತು. ಆಸ್ಪತ್ರೆಯಲ್ಲಿ ದಾಖಲಾಗಿದ್ದ ಸಮಯದಲ್ಲಿ ನನ್ನ ಬಳಿ ತೆಗೆದುಕೊಂಡು ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ದೂರಿನಲ್ಲಿ ತಿದ್ದುಪಡಿಯಾಗಿರುವ ಬಗ್ಗೆ ನಾನು ಗಮನಿಸಿರುವುದಿಲ್ಲ. ಆ ದಿನ ನಾನು ನನ್ನ ಹೇಳಿಕೆಗೆ 4 ಸಹಿಯನ್ನು ಹಾಕಿರುತ್ತೇನೆ. ಆದರೆ ನಿಪಿ-1 ರಲ್ಲಿ ಕೇವಲ ಒಂದು ಸಹಿ ಕಂಡುಬರುತ್ತಿದೆ ಎಂದರೆ ಸರಿ. ನಾನು ಆ ದಿನ 4 ಬಾರಿ ಸಹಿ ಹಾಕಿರುತ್ತೇನೆ ಎಂದು ಹೇಳಲು ಯಾವುದೇ ಪುರಾವೆ ನ್ಯಾಯಾಲಯದ ಮುಂದೆ ಕಂಡುಬರುತ್ತಿಲ್ಲ ಎಂದರೆ ಸರಿ. ಚಾಸಾ-7 ಮತ್ತು 8 ರವರ ಮನೆಯು ನಮ್ಮ ಮನೆಯಿಂದ ½ ಕೀ.ಮೀ ಅಂತರದಲ್ಲಿರಬಹುದು. ಸದರಿಯವರಿಗೆ ಪೋಲಿಸರು ಯಾವುದೇ ನೋಟೀಸ್ ಜಾರಿ ಮಾಡಿರುವುದಿಲ್ಲ.

ಚಾಸಾ-7 ಮತ್ತು 8 ರವರನ್ನು ಪೋಲಿಸರೇ ಕರೆಸಿರುತ್ತಾರೆ. ಅಂಗಡಿಗೆ ಬಂದ ಸಂದರ್ಭದಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಚಾಸಾ-7 ಮತ್ತು 8 ರವರು ಸ್ಥಳಕ್ಕೆ ಬಂದಿರುತ್ತಾರೆ. ನನಗೆ ಆದಂತಹ ಗಾಯಗಳನ್ನು ನಾನು ವೈದ್ಯರಿಗೆ ತಿಳಿಸಿ ಅವರ ವರದಿಯಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ನಿಪಿ-2 ನ್ನು ಬರೆಯುವ ಕಾಲದಲ್ಲಿ ಚಾಸಾ-7 ಮತ್ತು 8 ರವರು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಆರೋಪಿಗಳು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಗಳು ಅಂದಾಜು 3 ರಿಂದ 3 ಕಾಲು ಅಡಿ ಉದ್ದವಿರಬಹುದು. ಸದರಿ ವಸ್ತುಗಳ ಅಳತೆಯನ್ನು ಪೋಲಿಸರು

ಮಾಡಿರುತ್ತಾರೆ ಎಂದರೆ ಸರಿ. ಎಂ.ಒ.1 ಮತ್ತು 2 ಮೂರು ಅಡಿ ಉದ್ದ ಇಲ್ಲ ಎಂದರೆ ಸರಿ. ನಾನು ಆ ದಿನ ಹಾಕಿದ್ದ ಬೇಲಿಯನ್ನು 1 ರಿಂದ 6 ನೇ ಆರೋಪಿಗಳು ಕಿತ್ತುಹಾಕಿರುತ್ತಾರೆ. ಸದರಿ ಬೇಲಿಯ ತಂತಿಗಳನ್ನು ಪೋಲಿಸರು ಮಹಜರ್ ಕಾಲದಲ್ಲಿ ವಶಪಡಿಸಿಕೊಂಡಿರುವುದಿಲ್ಲ. ಸದರಿ ಬೇಲಿಯ ಮುಂದೆ ನನ್ನ ಮತ್ತು ಪಂಚರಾದ ಚಾಸಾ-7 ಮತ್ತು 8 ರವರ ಫೋಟೋ ತೆಗೆದಿರುವುದಿಲ್ಲ. ಮಹಜರ್ ನಲ್ಲಿ ನಮೂದಿಸಿರುವ ಚೆಕ್ಕುಬಂದಿಯ ದಕ್ಷಿಣ ದಿಕ್ಕಿಗೆ ನಾಗೇಶ್ ಭಟ್ಟ ರವರ ತೋಟ ಬರುತ್ತದೆ, ಉತ್ತರಕ್ಕೆ ರುದ್ರಪ್ಪ ರವರ ತೋಟ, ಪೂರ್ವಕ್ಕೆ ಪುಟ್ಟಸ್ವಾಮಿ ರವರ ತೋಟ ಮತ್ತು ಪಶ್ಚಿಮಕ್ಕೆ ಚಾಸಾ-3 ರವರ ತೋಟ ಬರುತ್ತದೆ.

ಆ ದಿನ ನಾನು ನೀಡಿದ ಮಾಹಿತಿಯ ಮೇರೆಗೆ ನಿಪಿ-2 ರಲ್ಲಿ ಪೋಲಿಸರು ಚೆಕ್ಕುಬಂದಿಯನ್ನು ನಮೂದಿಸಿರುತ್ತಾರೆ ಎಂದರೆ ಸರಿ. ನಾನು ಹೇಳಿದ ಚೆಕ್ಕುಬಂದಿ ನಿಪಿ-2 ರಲ್ಲಿ ಕಂಡುಬರುತ್ತಿಲ್ಲ ಎಂದರೆ ಸರಿ. ಸದರಿ ಚೆಕ್ಕುಬಂದಿಯನ್ನು ನಮೂದಿಸಿದ ಮಹಜರ್ ಪ್ರತಿಯು ಈ ದಿನ ನ್ಯಾಯಾಲಯದ ಮುಂದೆ ಕಂಡುಬರುತ್ತಿಲ್ಲ ಎಂದರೆ ಸರಿ. ಮಹಜರ್ ದಿನ ನನ್ನ ಮತ್ತು ಚಾಸಾ-2 ರವರೊಟ್ಟಿಗೆ 2-3 ಫೋಟೋಗಳನ್ನು ತೆಗೆಯಲಾಗಿರುತ್ತದೆ. ಸದರಿ ಫೋಟೋಗಳು ಈ ದಿನ ನ್ಯಾಯಾಲಯದ ಮುಂದೆ ಕಂಡುಬರುತ್ತಿಲ್ಲ ಎಂದರೆ ಸರಿ. ನಿಪಿ-3 ಮತ್ತು 4 ರಲ್ಲಿ ಚಾಸಾ-2 ರವರು ಕಂಡುಬರುತ್ತಿಲ್ಲ ಎಂದರೆ ಸರಿ. ದಿ.24.04.2023 ರಂದು ನಾನು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ಅದೇ ರೀತಿ ದಿ.26.04.2023 ರಂದು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ಆದರೆ ಆ ದಿನ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಸಾರ್ವಜನಿಕ ರಸ್ತೆಗೆ ಬೇಲಿ ಹಾಕಿದ ಕಾರಣ ಅದನ್ನು ಆರೋಪಿಗಳು ಪ್ರಶ್ನಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮನೆಗೆ ಮಾರ್ಗವಾಗಿರುವ ರಸ್ತೆಯಲ್ಲಿ ವಾಹನಗಳು ಓಡಾಡುತ್ತವೆ. ನಾನು ಬೇಲಿ ಮಾಡಿರುವ ರಸ್ತೆಯಲ್ಲಿ ಯಾವುದೇ ವಾಹನಗಳು ಚಲಾಯಿಸುವುದಿಲ್ಲ. ಸದರಿ ರಸ್ತೆಗೆ ಪಂಚಾಯ್ತಿಯವರು ಹಾಕಿದ್ದ ಮೋರಿಯನ್ನು ನಾನು ಕಿತ್ತು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮಹಜರ್ ಕ್ರಮವನ್ನು ಜರುಗಿಸುವ ದಿನ ಕೃತ್ಯ ನಡೆಯಿತು ಎಂದು ಹೇಳಲಾದ ಸ್ಥಳವು ನನಗೆ ಸೇರಿದ್ದು ಎಂದು ತೋರಿಸಲು ನಾನು ಕೆಲವು ದಾಖಲಾತಿಗಳನ್ನು ಪೋಲಿಸರಿಗೆ ನೀಡಿರುತ್ತೇನೆ. ಸದರಿ ದಾಖಲಾತಿಗಳು ಈ ದಿನ ನ್ಯಾಯಾಲಯದ ಮುಂದೆ ಕಂಡುಬರುತ್ತಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲಾತಿಯನ್ನು ನಾನು ಪೋಲಿಸರಿಗೆ ಇತ್ತೀಚಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಎಂ.ಒ.1 ಮತ್ತು 2 ಕಾಡು ಜಾತಿಯ ಮರವಾಗಿರುತ್ತವೆ. ಆದರೆ ಈ ನ್ಯಾಯಾಲಯದ ಮುಂದೆ ಇರುವ ದೊಣ್ಣೆಗಳು, ಒಂದು ಕಾಫೀ ಗಿಡದ ದೊಣ್ಣೆ ಮತ್ತು ಒಂದು ಕಾಡು ಜಾತಿಯ ಮರ ಎಂದರೆ ಸರಿ. ಎಂ.ಒ.1 ಮತ್ತು 2 ಎರಡೂ ಒಂದೇ ಅಳತೆಯಲಿರುತ್ತವೆ ಎಂದರೆ ಸರಿ. ಅದೇ ರೀತಿ ಅವುಗಳಲ್ಲಿ ಯಾವುದೇ ಹಾನಿ ಕಂಡುಬರುತ್ತಿಲ್ಲ ಎಂದರೆ ಸರಿ. ಮಹಜರ್ ಕಾಲದಲ್ಲಿ ಎಂ.ಒ.1 ಮತ್ತು 2 ರ ಜಾತಿಯ ಬಗ್ಗೆ ನಮೂದಿಸಿರುವುದಿಲ್ಲ. ಎಂ.ಒ.1 ಮತ್ತು 2 ಕೋಲುಗಳು ಎಂದರೆ ಸರಿ. ಸದರಿ ಕೋಲುಗಳನ್ನು ಸಾಮಾನ್ಯವಾಗಿ ಮಲೆನಾಡು ಭಾಗದಲಿ ಬೆಂಕಿಯನ್ನು ಹಚ್ಚಲು ಉಪಯೋಗಿಸುತ್ತಾರೆ ಎಂದರೆ ಸರಿ. ಸದರಿ ಸೌದೆಯನ್ನು ನಾನು ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ಮತ್ತು 4 ರಲ್ಲಿ ಕಂಡುಬರುತ್ತಿರುವ ರಸ್ತೆಯು ಮೇಲ್ಮುಕವಾಗಿ ಇದೆ

ಎಂದರೆ ಸರಿ.

ಸದರಿ ನಿಶಾನೆಯಲ್ಲಿ ಬಿದುರು ಮರದಿಂದ ಮಾಡಿದಂತಹ ಗೇಟ್ ಕಂಡುಬರುತ್ತದೆ ಎಂದರೆ ಸರಿ. ಸಾರ್ವಜನಿಕರ ರಸ್ತೆಗೆ ಬೇಲಿಯನ್ನು ಹಾಕಿ ತೊಂದರೆಯುಂಟು ಮಾಡಿದ ಬಾಬ್ತು ಪ್ರಶ್ನಿಸಿದ ಕಾರಣ ನಾನು ಆರೋಪಿಗಳ ಮೇಲೆ ಹಲ್ಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ನೀಡಿದ ದೂರಿನ ಪ್ರತಿಯಾಗಿ ಚಿಕ್ಕಮಗಳೂರಿನ ನನ್ನ ಸಂಭಂಧಿಕರ ಮಾತು ಕೇಳಿ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ಪೋಲಿಸರು ನನ್ನೊಟ್ಟಿಗೆ ಒಂದು ಫೋಟೋವನ್ನು ತೆಗೆದಿರುತ್ತಾರೆ. ಆದರೆ ಅಂತಹ ಫೋಟೋಗಳು ಈ ದಿನ ನ್ಯಾಯಾಲಯದ ಮುಂದೆ ಕಂಡುಬರುತ್ತಿಲ್ಲ ಎಂದರೆ ಸರಿ. ಪ್ರಸ್ತುತ ಪ್ರಕರಣಕ್ಕಾಗಿ ಸದರಿ ಫೋಟೋಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಹೇಳಿದ ದಿನಾಂಕದಂದು ಪೋಲಿಸರು ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಹಿಂದೆ ನನ್ನ ಹೆಸರಿನಲ್ಲಿ ಹಲವು ಪ್ರಕರಣಗಳು ದಾಖಲಾಗಿದ್ದು, ಅದರಿಂದ ಆರೋಪಿಗಳಿಗೆ ಭಯವುಂಟಾಗುತ್ತದೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿಗಳಿಗೆ ಸುಮಾರು 75 ವಯಸ್ಸು ಎಂದರೆ ಸರಿಯಲ್ಲ. 5 ಮತ್ತು 6 ನೇ ಆರೋಪಿಗಳ ಮದುವೆಗೆ ತೊಂದರೆಯುಂಟು ಮಾಡುವ ಉದ್ದೇಶದಿಂದ ಅವರನ್ನು ಈ ಪ್ರಕರಣದಲ್ಲಿ ಅರೋಪಿಗಳಾಗಿ ತೋರಿಸಲಾಗಿದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1468/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಪ್ರೇಮ | ಪ್ರಾಸಾ-2 |
| ಗಂಡನ ಹೆಸರು | : ಮುದ್ದು | ಚಾಸಾ-2 |
| ವಯಸ್ಸು | : 38 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಗೃಹಿಣಿ | ದಿನಾಂಕಃ 14.08.2025 |
| ವಾಸಸ್ಥಳ | : ದೊಡ್ಡಹಳ್ಳ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ 2 ಮತ್ತು 4 ನೇ ಆರೋಪಿಗಳ ಪರಿಚಯ ನನಗಿದೆ. 1, 3 ಮತ್ತು 6 ನೇ ಆರೋಪಿಗಳು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಚಾಸಾ-1 ನನ್ನ ಗಂಡ. ಚಾಸಾ-3 ರಿಂದ 6 ರವರ ಪರಿಚಯ ನನಗಿದೆ.

ದಿ.20.04.2023 ರಂದು ಸ.5.00 ರ ಸಮಯದಲ್ಲಿ ನಮ್ಮ ಮನೆಯ ಮುಂದೆ ಇರುವ ಬೇಲಿಯನ್ನು ಸರಿಪಡಿಸುತ್ತಿರುವ ಸಮಯದಲ್ಲಿ ಸ.5.30 ರಷ್ಟರಲ್ಲಿ 1 ರಿಂದ 6 ನೇ ಆರೋಪಿಗಳು ಸದರಿ ಸ್ಥಳಕ್ಕೆ ಬಂದು ತಂತಿ ಬೇಲಿಯನ್ನು ಹಾಕದಂತೆ ನಮಗೆ ಹೇಳಿರುತ್ತಾರೆ. ನಂತರ ನಮ್ಮಗಳಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಮತ್ತು ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ನಂತರ ಅಲ್ಲಿಂದ ನಾನು ಮತ್ತು ಚಾಸಾ-1 ರವರು ಮೂಡಿಗೆರೆಯ ಆಸ್ಪತ್ರೆಗೆ ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ದಾಖಲಾಗಿದ್ದ ಸಮಯದಲ್ಲಿ ಪೋಲಿಸರು ನಮ್ಮ ಬಳಿ ಮಾಹಿತಿಯನ್ನು ಪಡೆದಿರುತ್ತಾರೆ. ನಾವು ಆಸ್ಪತ್ರೆಯಲ್ಲಿ 3 ದಿನ ದಾಖಲಾಗಿರುತ್ತೇವೆ. ದಿ.26.04.2025 ರಂದು ನಾವು ಆಸ್ಪತ್ರೆಯಿಂದ ಮನೆಗೆ ಹಿಂದಿರುಗಿರುತ್ತೇವೆ. ಅದೇ ದಿನ ಬಣಕಲ್ ಪೋಲಿಸರು ನಮ್ಮ ಮನೆಗೆ ಬಂದಿರುತ್ತಾರೆ. ಅದೇ ದಿನ ಪೋಲಿಸರು ಸ.4.00 ರಿಂದ 5.00 ರ ಸಮಯದವರೆಗೂ ನಮ್ಮ ಮನೆಯಲ್ಲಿಯೇ ಇರುತ್ತಾರೆ. ನಂತರ ನಾವು ಘಟನೆಯ ಬಗ್ಗೆ ಪೋಲಿಸರಿಗೆ ವಿವರಿಸಿರುತ್ತೇವೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.20.04.2023 ರಂದು ಘಟನೆ ನಡೆದ ದಿನ ಆರೋಪಿಗಳು ಕೈ ಮತ್ತು ದೊಣ್ಣೆಯಿಂದ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಘಟನೆಯು ಸ.7.00 ರ ಸಮಯದಲ್ಲಿ ಆಗಿರುತ್ತದೆ ಎಂದರೆ ಸರಿ. ಆರೋಪಿಗಳಿಗೆ ಇತರೆ ರಸ್ತೆಯ ಮಾರ್ಗ ಇದ್ದರೂ ಸಹಾ ಇದೇ ರಸ್ತೆ ಬೇಕೆಂದು ಜಗಳ ಮಾಡಿರುತ್ತಾರೆ ಎಂದರೆ ಸರಿ. ಆ ದಿನ 1 ನೇ ಆರೋಪಿಯು ಚಾಸಾ-1 ರವರಿಗೆ

ತಮ್ಮ ಎಡ ಕೆನ್ನೆಗೆ ಹೊಡೆದಿರುತ್ತಾರೆ ಎಂದರೆ ಸರಿ. ನಂತರ 3 ಮತ್ತು 4 ನೇ ಆರೋಪಿಗಳು ನನ್ನನ್ನು ಹಿಡಿದುಕೊಂಡು 5 ನೇ ಆರೋಪಿಯು ಕಾಡು ಜಾತಿ ಮರದಿಂದ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಅದಲ್ಲದೆ ಚಾಸಾ-1 ರವರ ಕಾಲಿಗೂ ಮತ್ತು ಕೈಗೂ ಹೊಡೆದಿರುತ್ತಾರೆ. ಸದರಿ ಸಮಯದಲ್ಲಿ ನೋವನ್ನು ತಡೆಯಲಾರದ ಕಿರುಚುತ್ತಿದ್ದ ಚಾಸಾ-1 ರವರನ್ನು ಸಂತೈಸಲು ಹೋದ ಸಂದರ್ಭದಲ್ಲಿ 1 ನೇ ಆರೋಪಿಯು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನನಗೂ ಮತ್ತು ಚಾಸಾ-1 ರವರಿಗೆ 5 ಮತ್ತು 6 ನೇ ಆರೋಪಿಗಳು ಕುತ್ತಿಗೆ ಮತ್ತು ಬೆನ್ನಿನ ಭಾಗಕ್ಕೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ಚಾಸಾ-3 ರವರು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ಜಗಳವನ್ನು ಬಿಡಿಸಿದ ನಂತರ ಚಾಸಾ-4 ರಿಂದ 6 ರವರು ಸದರಿ ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸರಿ.

ನಂತರ 1 ರಿಂದ 6 ನೇ ಆರೋಪಿಗಳು ನನಗೂ ಮತ್ತು ಚಾಸಾ-1 ರವರಿಗೂ ಜೀವ ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ ಸರಿ. ಸದರಿ ವಿಷಯದ ಕುರಿತು ನಾನು ದಿ.26.04.2023 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಎಂ.ಓ.1 ಮತ್ತು 2 ರಿಂದ ಆ ದಿನ ಆರೋಪಿಗಳು ನನ್ನ ಮತ್ತು ಚಾಸಾ-1 ರವರ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿಪರ ಶ್ರೀ ಕೆ.ಸಿ.ಸಿ ವಕೀಲರಿಂದಃ**

ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ಆ ದಿನ ಬಣಕಲ್ ಆಸ್ಪತ್ರೆಗೆ ನಾವು ಹೋಗಿರುವುದಿಲ್ಲ. ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಗೆ ತಲುಪುವಾಗ ಸ.7.00 ಆಗಿರುತ್ತದೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ತೆರಳಿರುತ್ತೇವೆ. ಮೂಡಿಗೆರೆ ಆಸ್ಪತ್ರೆಯಲ್ಲಿ ನಮಗೆ ಯಾವುದೇ ಚಿಕಿತ್ಸೆ ನೀಡಿರುವುದಿಲ್ಲ. ಸದರಿ ಸಮಯದಲ್ಲಿ ಯಾರು ಯಾವುದರಿಂದ ಹಲ್ಲೆ ಮಾಡಿದ್ದರು ಎಂಬುದರ ಕುರಿತು ವೈದ್ಯರಿಗೆ ತಿಳಿಸಿರುವುದಿಲ್ಲ. ರಾ.8.00 ರ ಸಮಯಕ್ಕೆ ನಾನು ಮತ್ತು ಚಾಸಾ-1 ರವರು ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ದಾಖಲಾಗಿರುತ್ತೇವೆ ಎಂದರೆ ಸರಿ. ಚಾಸಾ-3 ರವರು ಚಾಸಾ-1 ರವರ ತಮ್ಮ ಮತ್ತು ನನ್ನ ಮೈದುನನಾಗಿರುತ್ತಾರೆ. ಚಾಸಾ-1 ಮತ್ತು 3 ರವರ ನಡುವೆ ಹಲವು ವರ್ಷಗಳಿಂದ ಮನಸ್ಥಾಪವಿರುತ್ತದೆ ಎಂದರೆ ಸರಿ. ರಸ್ತೆಯ ಮಾರ್ಗವಾಗಿ ಮನೆಗೆ ಬಂದಲ್ಲಿ ಮೊದಲು ಚಾಸಾ-3 ರವರ ಮನೆ, ನಂತರ ನಮ್ಮ ಮನೆ, ಆನಂತರದಲ್ಲಿ ಆರೋಪಿಗಳ ಮನೆ ಬರುತ್ತದೆ. ಭಾರತಿ ಬೈಲಿನಿಂದ ಬಲಕ್ಕೆ ತಿರುಗಿ ನಮ್ಮ ಮನೆಗೆ ತಲುಪುವ ರಸ್ತೆಯು ಮುಂದುವರೆದು ಕಂದೂರು ಗ್ರಾಮಕ್ಕೆ ತಲುಪುತ್ತದೆ ಎಂದರೆ ಸರಿ. ಹರೀಶ, ಸೌಮ್ಯ ಮತ್ತು ಅರುಣ ಎಂಬುವರ 1 ನೇ ಆರೋಪಿಗಳ ಮಕ್ಕಳು ಎಂದರೆ ಸರಿ. ಗಲಾಟೆಯಾಯಿತು ಎಂದು ಹೇಳಿದ ದಿನ ಸದರಿಯವರು ಸ್ಥಳದಲ್ಲಿ ಹಾಜರಿದ್ದರು.

ನಾನು ಪೋಲಿಸರಿಗೆ ನೀಡಿದ ಹೇಳಿಕೆಯನ್ನು ಓದಿ ಸಹಿ ಮಾಡಿರುತ್ತೇವೆ. ಸದರಿ ಹೇಳಿಕೆಯಲ್ಲಿ ಘಟನೆ ನಡೆಯಿತು ಎಂದು ಹೇಳಲಾದ ದಿನ ಹರೀಶ, ಸೌಮ್ಯ ಮತ್ತು ಅರುಣ ಎಂಬುವವರು ಸ್ಥಳದಲ್ಲಿ ಹಾಜರಿದ್ದ ಬಗ್ಗೆ ಹೇಳಿ ಬರೆಸಲಾಗಿರುತ್ತದೆ. ಆದರೆ ನಾನು ನೀಡಿದ

ಹೇಳಿಕೆಯಲ್ಲಿ ಸದರಿ ವ್ಯಕ್ತಿಗಳು ಸ್ಥಳದಲ್ಲಿ ಹಾಜರಿರುವುದಿಲ್ಲ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ನನಗೆ ಆರೋಪಿಗಳು ಹಲ್ಲೆ ಮಾಡಿರುವ ಕುರಿತು ವೈದ್ಯರಿಗೆ ಹೇಳಿ ಅವರ ವರದಿಯಲ್ಲಿ ತಿಳಿಸಲಾಗಿರುತ್ತದೆ. ಅದೇ ರೀತಿ ಯಾವ ವಸ್ತುವಿನಿಂದ ಹಲ್ಲೆ ಮಾಡಲಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ. ಆಸ್ಪತ್ರೆಗೆ ನನ್ನೊಡನೆ ಚಾಸಾ-1 ರವರು ಬಂದ ಕುರಿತು ವರದಿಯಲ್ಲಿ ಬರೆಸಲಾಗಿರುತ್ತದೆ. ಯಾವ ಯಾವ ಆರೋಪಿಗಳು ಯಾವುದರಲ್ಲಿ ಥಳಿಸಿರುತ್ತಾರೆ ಎಂಬುದರ ಬಗ್ಗೆಯೂ ಸಹಾ ನಮೂದಿಸಲಾಗಿರುತ್ತದೆ. ದಿ.26.04.2023 ರಂದು ಪೋಲಿಸರು ಸ.4.00 ರಿಂದ 5.00 ರ ಸಮಯದವರೆಗೂ ನಮ್ಮ ಮನೆಯ ಬಳಿ ಕುಳಿತಿರುತ್ತಾರೆ. ಒಂದು ಗಂಟೆಯ ನಂತರ ಅವರು ಹಿಂತಿರುಗಿರುತ್ತಾರೆ ಎಂದರೆ ಸರಿ. ಘಟನೆ ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ನನ್ನನ್ನು ನಿಲ್ಲಿಸಿ ಯಾವುದೇ ಫೋಟೋವನ್ನು ತೆಗೆಯಲಾಗಿರುವುದಿಲ್ಲ. ಹಲ್ಲೆ ನಡೆಯಿತು ಎಂದು ಹೇಳಲಾದ ದಿನ ನಾನು ನೈಟಿಯನ್ನು ಧರಿಸಿರುತ್ತೇನೆ.

ಸದರಿ ಹಲ್ಲೆಯಿಂದ ನಾನು ಧರಿಸಿದ್ದ ಬಟ್ಟೆಯು ಹರಿದಿತ್ತು. ಸದರಿ ಬಟ್ಟೆಯನ್ನು ಮಹಜರ್ ಕಾಲದಲ್ಲಿ ನಾನು ಪೋಲಿಸರಿಗೆ ನೀಡಿರುವುದಿಲ್ಲ. ನನಗೆ ಕೋಲಿನಿಂದ ಯಾರು ಹಲ್ಲೆ ಮಾಡಿರುತ್ತಾರೆ ಎಂದು ನಾನು ಹೇಳಿ ಬರೆಸಿರುವುದಿಲ್ಲ. ನಿಪಿ-3 ರಲ್ಲಿ ಕಂಡುಬರುವ ಬೇಲಿಯನ್ನು ಚಾಸಾ-1 ರವರು ಮಾಡಿರುತ್ತಾರೆ ಎಂದರೆ ಸರಿ. ಸಾರ್ವಜನಿಕರ ರಸ್ತೆಯಲ್ಲಿ ಸದರಿ ಗೇಟನ್ನು ಅಳವಡಿಸಿದ ಕುರಿತು ಪ್ರಶ್ನಿಸಲಾಗಿ ನಾವುಗಳು ಆರೋಪಿಗಳ ಮೇಲೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-7 ಮತ್ತು 8 ರವರ ಮನೆಯು ನಮ್ಮ ಮನೆಯಿಂದ ½ ಕೀ.ಮೀ ಅಂತರವಿದೆ. ನಮ್ಮ ಮನೆಯಿಂದ ಮಾತನಾಡಿದ್ದಲ್ಲಿ ಅವರಿಗೆ ಕೇಳಿಸುವುದಿಲ್ಲ. ಚಾಸಾ-7 ಮತ್ತು 8 ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ಚಾಸಾ-7 ಮತ್ತು 8 ರವರು ನಮ್ಮ ಮನೆಯ ಅಂಗಡಿಯ ಬಳಿ ಬಂದಿರುವುದಿಲ್ಲ. ಸದರಿಯವರಿಗೆ ನೋಟೀಸನ್ನು ಪೋಲಿಸರು ಜಾರಿ ಮಾಡಿರುವುದಿಲ್ಲ. ಪೋಲಿಸರು ಚಾಸಾ-7 ಮತ್ತು 8 ರವರನ್ನು ಕರೆಸಿರುತ್ತಾರೆ. ನಾನು ಪೋಲಿಸ್ ಠಾಣೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ದಿ.22.04.2023 ರಂದು ನೀಡಿರುತ್ತೇನೆ ಎಂದರೆ ಸರಿ. ನಾನು ಎಷ್ಟು ಸಹಿಗಳನ್ನು ಮಾಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. 1 ಮತ್ತು 2 ನೇ ಆರೋಪಿಗಳ 3 ಜನ ಮಕ್ಕಳು ಮಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರೆ ಸರಿ.

5 ಮತ್ತು 6 ನೇ ಆರೋಪಿಗಳಿಗೆ ಮದುವೆ ವಯಸ್ಸಾಗಿದೆ ಎಂದರೆ ಸರಿ. ಸದರಿ ವ್ಯಕ್ತಿಗಳ ಮದುವೆಯನ್ನು ತಡೆಯುವ ಉದ್ದೇಶದಿಂದ ಪ್ರಸ್ತುತ ಪ್ರಕರಣದಲ್ಲಿ ಅವರುಗಳನ್ನು ಆರೋಪಿಗಳಾಗಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. 3 ನೇ ಆರೋಪಿಯು ನಮ್ಮ ಮನೆಯಿಂದ ಅಂದಾಜು 30 ರಿಂದ 35 ಕೀ.ಮೀ ಅಂತರದಲ್ಲಿ ವಾಸಿಸುತ್ತಿರುತ್ತಾರೆ ಎಂದರೆ ಸರಿ. ಗಲಾಟೆ ನಡೆಯಿತು ಎಂದು ಹೇಳಲಾದ ದಿನ ಅವರು ಹಾಜರಿರದಿದ್ದರೂ ಅವರ ಹೆಸರನ್ನು ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ದೂರು ನೀಡಿದ ನಂತರ ನಾವು ಅವರ ವಿರುದ್ಧ ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣದ ಪೂರ್ವದಲ್ಲಿಯೂ 2 ನೇ ಆರೋಪಿಯು ನನ್ನ ಮತ್ತು ಚಾಸಾ-1 ರವರ ವಿರುದ್ಧ ಹಲವು ದೂರನ್ನು ಬಣಕಲ್ ಠಾಣೆಯಲ್ಲಿ ದಾಖಲಿಸಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಗೆ ಸುಮಾರು 75 ವರ್ಷ ವಯಸ್ಸು ಎಂದರೆ ಸರಿ. 1 ನೇ ಆರೋಪಿಗೆ

ನಾವುಗಳು ಹಲ್ಲೆ ಮಾಡಿದ ಬಾಬ್ತು ಅವರು ಆಸ್ಪತ್ರೆಗೆ ದಾಖಲಾಗಿ ನಂತರ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ರವರು 1 ನೇ ಆರೋಪಿಯೊಟ್ಟಿಗೆ ಗಲಾಟೆ ಮಾಡುತ್ತಿದ್ದ ಸಂದರ್ಭದಲ್ಲಿ ಚಾಸಾ-3 ರಿಂದ 6 ರವರು ಸ್ಥಳದಲ್ಲಿಯೇ ಇದ್ದರು ಎಂದರೆ ಸಾಕ್ಷಿಯು ನಂತರದಲ್ಲಿ ಅವರು ಗಲಾಟೆಯ ಶಬ್ದ ಕೇಳಿ ಸ್ಥಳಕ್ಕೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ನಾವು ನೀಡಿರುವ ದೂರಿನ ಬಾಬ್ತು ಗಲಾಟೆಯಾಗುವ ಸಂದರ್ಭದಲ್ಲಿ ಚಾಸಾ-3 ಮತ್ತು 6 ರವರು ಸ್ಥಳದಲ್ಲಿಯೇ ನಿಂತಿದ್ದರು ಎಂದರೆ ಸಾಕ್ಷಿಯು ಸದರಿ ಗಲಾಟೆಯನ್ನು ನೋಡಿ ಅವರು ಸ್ಥಳಕ್ಕೆ ಓಡಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮನೆಯಿಂದ ಚಾಸಾ-4 ರಿಂದ 6 ರವರ ಮನೆಗೆ ತಲುಪಲು 10 ನಿಮಿಷಗಳ ಸಮಯ ಬೇಕಾಗುತ್ತದೆ. ಚಾಸಾ-3 ರವರ ಮನೆಯು ನಮ್ಮ ಮನೆಯ ಪಕ್ಕದಲ್ಲೆ ಇರುತ್ತದೆ. ಸದರಿ ಮನೆಯಲ್ಲಿ ಚಾಸಾ-3 ರವರು ತಮ್ಮ ಕುಟುಂಬದವರೊಟ್ಟಿಗೆ ವಾಸಿಸುತ್ತಿರುತ್ತಾರೆ ಎಂದರೆ ಸರಿ. ಗಲಾಟೆಯ ಸಂದರ್ಭದಲ್ಲಿ ಚಾಸಾ-3 ರವರ ಪತ್ನಿ ಗಲಾಟೆಯನ್ನು ಬಿಡಿಸಲು ಬಂದಿರುವುದಿಲ್ಲ. ಸದರಿ ವಿಷಯದ ಕುರಿತು ನಮ್ಮ ಹೇಳಿಕೆಯಲ್ಲಿ ತಿಳಿಸಲಾಗಿರುವುದಿಲ್ಲ. ನಮಗೆ ಯಾವುದೇ ಹಲ್ಲೆಯಾಗದಿದ್ದರೂ ಸಹಾ 2 ನೇ ಆರೋಪಿಗಳು ನೀಡಿರುವ ದೂರಿನ ಪ್ರತಿಯಾಗಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳು ಮಾಡಿದ ಹಲ್ಲೆಯಿಂದ ನನ್ನ ಕುತ್ತಿಗೆಯು ಊತಗೊಂಡಿತ್ತು. ಸದರಿ ವಿಷಯವನ್ನು ವೈದ್ಯರಿಗೆ ತಿಳಿಸಿರುತ್ತೇನೆ. ಸದರಿ ಹಲ್ಲೆಯಿಂದ ನನ್ನ ಬೆನ್ನಿನ ಮೇಲೆ ಅರ್ಧಯಷ್ಟು ಬರೆ ಬಿದ್ದಿರುತ್ತದೆ. ಅದನ್ನು ಸಹಾ ನಾವು ವೈದ್ಯರಿಗೆ ತಿಳಿಸಿರುತ್ತೇವೆ. ಆರೋಪಿಗಳು ಯಾವುದೇ ಹಲ್ಲೆ ಮಾಡದಿದ್ದರೂ ಸಹಾ ಚಾಸಾ-1 ಮತ್ತು ನನ್ನ ನಡುವೆಯಾದ ಗಲಾಟೆಯ ಬಾಬ್ತು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ತೋಟದಲ್ಲಿ ಕೆಲಸ ಮಾಡುವಾಗ ಬಿದ್ದಲ್ಲಿ ಗಾಯವಾಗುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.